ಕೆಂಡಾಮಂಡಲವಾದರು. ಹುಚ್ಚಯ್ಯನ ಹೆಸರನ್ನು ಹೇಗೋ ಉಚ್ಚರಿಸಿದರೂ ಸುಂಕ್ಲಮ್ಮನ ಹೆಸರು ಹೇಳಲು ನಟ ನಟಿಯರಿಗೆ ಕಷ್ಟವಾಗುತ್ತಿತ್ತು.

'ಅಯ್ಯೋ! ಏನು ಸ್ವಾಮಿ! ಅದು ನಮ್ಮ ದೈವ. ದೈವದ ಹೆಸರೇಳಕೂ ಬರಲ್ವ!' ಎಂದು ಸುಂಕ್ಲಮ್ಮ ನಟ ನಟಿಯರ ಮೇಲೆ ಗರಂ ಆದಳು. ಈ ಸಲ ಬದಲಾವಣೆಯೆಂಬಂತೆ ಹುಚ್ಚಯ್ಯನನ್ನು ಬೇರೆ ರೂಮಿಗೆ ಕಳಿಸಿ ಸುಂಕ್ಲಮ್ಮನಿಗೆ ಮೊದಲು ಪ್ರಶ್ನೆ ಹಾಕತೊಡಗಿದರು. ಅವಳು ಏನು ಮಾಡಿದರೂ ಹಾಟ್ ಸೀಟಿನ ಮೇಲೆ ಕುಳಿತುಕೊಳ್ಳದೆ ನಿಂತೇ ಇದ್ದಳು. ಎಂದೂ ಕುರ್ಚಿಯ ಮೇಲೆ ಕೂರದ ಅವಳಿಗೆ ಎತ್ತರಕ್ಕಿದ್ದ ಕುರ್ಚಿಯ ಮೇಲೆ ಕೂತರೆ ಬಿದ್ದುಬಿಡುವ ಹೆದರಿಕೆಯಿತ್ತು. ಅವಳು ಉಟ್ಟಿದ್ದ ಸೀರೆ ಅಲ್ಲಲ್ಲಿ ಸವೆದಿತ್ತು ಮತ್ತು ಬಣ್ಣ ಕಳೆದುಕೊಂಡು ಬೆಳ್ಳಗಾಗಿತ್ತು. ಆ ಸೀರೆ, ಹವಾಯಿ ಚಪ್ಪಲಿ, ಬಳೆ ಅಕರಾಳ ವಿಕರಾಳವಾಗಿ ಕಂಡು ಕೆಲವರು ಮುಜುಗರದಿಂದ ಮುಖ ಸಿಂಡರಿಸಿಕೊಂಡರೆ ಮತ್ತೆ ಕೆಲವರು ಗಹಗಹಿಸಿ ನಗತೊಡಗಿದರು. ನಟ ನಟಿಯರು ತಮ್ಮ ಭಾಷಾ ವೈಖರಿಯನ್ನು ಬದಲಾಯಿಸಿಕೊಂಡು ಸಂಪೂರ್ಣ ಕನ್ನಡದಲ್ಲಿ ಮತ್ತು ಸರಳವಾಗಿ ಮಾತನಾಡಲು ತಿಣುಕತೊಡಗಿದರು. ಎಲ್ಲ ಪ್ರಶ್ನೆಗಳನ್ನೂ ಮೌಖಿಕವಾಗಿ ಕೇಳಬೇಕಾಯಿತು.

ನಟಿ: ಯಾವ ಬ್ರ್ಯಾಂಡಿನ ಪೇಸ್ಟು ಬ್ರಶ್ನಲ್ಲಿ ಹಲ್ಲುಜ್ಜುತ್ತೀಯ ಸುಂಕ್ಲಮ್ಮ, ಕ್ಷಮಿಸಿ ಶ್ರೀಮತಿ ಸುಂಕ್ಲಮ್ಮಾಜಿ?

ಸುಂಕ್ಲಮ್ಮ: ಅಯ್ಯೋ! ಸರ್ಯಾಗೇಳ್ದೆ ಕಣಕ್ಕ! ಹಲ್ಪುಡಿ ಇರ್ತದಲ್ಲಕ್ಕ ! ಅದ್ರಾಗೆ ಹಲ್ಲು ತಿಕ್ಕದು. ಮೊದ್ಲು ಇದ್ಲಿ ಕಡ್ಡು ಹಲ್ಲು ತಿಕ್ತಿದ್ವಿ. ಈಗ ಇದ್ಲಿಗೆ ದೊಡ್ರೋಗ ಬಂದೈತೆ. ಅವು ಸಿಗ್ತಿಲ್ಲ. ಯಾಕಕ್ಕ ಇಂಥ ಘನಂದಾರಿ ಪ್ರಶ್ನೆ ಕೇಳ್ತಿದೀಯಾ? ವಸಿ ನ್ಯಾಯವಾಗಿ ಕೇಳಕ್ಕ. ಇಂಪಾರ್ಟೆಂಟು.

ನಟಿ: ಯಾವ ಪೌಡರ್ ಬಳಸ್ತೀರಿ ಮಸ್ಲಿ ಸುಂಕ್ಲಮ್ಮಾಜಿ?

ಸುಂಕ್ಲಮ್ಮ: ಪೌಡ್ರು ಗಿವುಡ್ರು ಯಾವಳೂ ಇಲ್ಲ. ಒಂದ್ಸಲ ಆಗಸ್ಟ್ 15 ಕ್ಕೆ ಮಗಳು ಗಲಾಟೆ ಮಾಡಿದ್ಲುಂತ ಮಗಳಿಗೆ ಗೊತ್ತಾಗದಂತೆ ಅಕ್ಕಿ ಹಸಿಟ್ಟು ಹಚ್ಚಿ ಕಳಿಸಿದ್ದೆ.

ನಟಿ: ಟಾಯ್ಲೆಟ್ ಸೋಪು ಯಾವ್ದು ಸುಂಕ್ಲಮ್ಮಾಜಿ?

ಸುಂಕ್ಲಮ್ಮ: ಬಟ್ಟೆ ಸೋಪ್ನೆ ಮೈಗೂ ಹಚ್ಕಂತೀವಿ. ಟಾಯ್ಲೆಟ್ ಸೋಪೂ ಇಲ್ಲ, ಲೆಟ್ರಿನ್ ಸೋಪೂ ಅಲ್ಲ. ಅಗಲೆಲ್ಲ ಮಾಜಿ ಮಾಜಿ ಅನ್ಬೇಡ ಕಣಕ್ಕ, ಸುಂಕ್ಲಮ್ಮ ಅನ್ನು.

ನಟಿ: ಶ್ಯಾಂಪೂ?

ಸುಂಕ್ಲಮ್ಮ: ತಮಾಷಿ ಮಾಡ್ಬೇಡ ಕಣಕ್ಕ. ಅದ್ಕೇ ನಾನೇಳಾದು. ಇಂಗ್ಲೀಶ್ ಮಾತಾಡವ್ಕೆ ತಿಳವಳ್ಕೆ ಕಡಿಮೆ ಅಂತ. ಶಾಂಪೂ ಅಂತೆ ಶಾಂಪೂ. ನಮ್ಮ ಸೌಕಾರ್ ಮನೇಲಿ ಕಣ್ಣಾಗೆ ನೋಡಿದಿನಷ್ಟೆ. ಬಾತ್ ಟಬ್, ಕಮೋಡು ಉಜ್ಜಬೇಕಾದ್ರೆ.

ನಟಿ: ಯಾವ ಬ್ರ್ಯಾಂಡಿನ ಟವಲ್ಲು ಉಪಯೋಗಿಸ್ತೀರಿ?

ಸುಂಕ್ಲಮ್ಮ: ನನ್ನ ಯಾವುದಾದ್ರೂ ಹಳೇ ಸೀರೆ. ಇಲ್ಲ ಅಂದ್ರೆ ನನ್ನ ಗಂಡನ ಹಳೆ ಪಂಚೇನೇ ಟವಲ್ಲು ನಮ್ಮನ್ಲಿ.

ಪ್ರತಿ ಉತ್ತರಕ್ಕೂ ನಟ ನಟಿಯರಿಬ್ಬರೂ ನಗುತ್ತ, 'ಅಯ್ಯೋ! ಅದು ಬಹಳ **unhygienic, diseases** ಬಂದುಬಿಡ್ತವೆ...' ಇತ್ಯಾದಿ ಹೇಳುತ್ತಿದ್ದರು. ಅವರ ಮುಖದ ಮೇಲೆ 'ತಾವು ಸೇಫ್' ಎಂಬ ಸಮಾಧಾನವಿತ್ತು. ಮೇಲ್ವರ್ಗದವರೆಂಬ ಜಂಭವಿತ್ತು. ಎದುರು ಕೂತವರು ಕೀಳುದರ್ಜೆ ಎಂಬ ಅಹಂಕಾರವೂ ತುಂಬಿತ್ತು.

ನಟಿ: ನಿಮ್ಮ ಮನೆಯಲ್ಲಿ ಯಾವ ಮೇಜು, ಕುರ್ಚಿ, ಮಂಚಗಳಿವೆ? ಯಾವ ಬ್ರ್ಯಾಂಡು?

ಸುಂಕ್ಲಮ್ಮ: ನೆಲ ಬ್ರ್ಯಾಂಡು ಕಣಕ್ಕ. ನಮ್ಮನ್ಲಿ ನೆಲವೇ ಕುರ್ಚಿ ಮೇಜು ಮಂಚ ಎಲ್ಲ.

ಸುಂಕ್ಲಮ್ಮನ ಮಾತುಗಳು ಅವರಿಗೆ ಅರ್ಥವಾಗದೆ ಹೋದವು. ಬಡತನವೆಂಬುದು ಅವರಿಗೆ ಊಹಾತೀತವಾಗಿತ್ತು. ಅವರು ಮುಂದಿನ ಪ್ರಶ್ನೆಗೆ ಹೋದರು.

ನಟಿ: ಯಾವ ಬೆಡ್ ದಿಂಬು ರಗ್ಗು?

